ಪ್ರವಾಸೋದ್ಯಮ ಅಭಿವೃದ್ಧಿ

301(507); ಶ್ರೀ ಪ್ರಕಾಶ್ ಹೆಚ್.ಎಸ್. (ಹಾಸನ)

ಅ) ಹಾಸನ ಜಿಲ್ಲೆಯಲ್ಲಿ ಪುರಾತನವಾದ ದೇವಸ್ಥಾನಗಳು ಮತ್ತು ಪ್ರವಾಸಿ ತಾಣಗಳಿದ್ದು, ಅವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಕಳೆದ 2 ವರ್ಷಗಳಲ್ಲಿ ಪ್ರವಾಸೋದ್ಯಮಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಂಜೂರು ಮಾಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು (ವರ್ಷವಾರು, ವಿಧಾನಸಭಾವಾರು ಸಂಪೂರ್ಣ ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳ ಬಳಿ ಪ್ರವಾಸಿಗರಿಗೆ ಅವಶ್ಯಕ ಸೌಕರ್ಯಗಳನ್ನು ಒದಗಿಸುವ ಸಂಬಂಧ ಯಾತ್ರಿನಿವಾಸ, ಡಾರ್ಮಿಟರಿ, ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ, ಸಂಪರ್ಕ ರಸ್ತೆಗಳನ್ನು ಹಾಗೂ ಇತರೆ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

ಆ) ಹಾಸನ ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಂಜೂರು ಮಾಡಿದ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡಿರುವ ಅನುದಾನದ ವಿವರ:

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ತಾಲ್ಲುಕುಗಳು	2012–13	2013–14
1	ಬೇಲೂರು	98.76	15.86
2	ಸಕಲೇಶಪುರ	17.29	–
3	ಅರಸೀಕೆರೆ	195.00	198.52
4	ಅರಕಲಗೂಡು	10.00	50.00

5	ಹೊಳೆನರಸೀಪುರ	50.00	48.81
6	ಹಾಸನ	–	98.00
	ಒಟ್ಟು	**371.05**	**411.19**

ಮನೆಗಳ ಹಂಚಿಕೆ

307(616); ಶ್ರೀ ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ)

ಅ) ಮುಂದಿನ ಐದು ವರ್ಷಗಳಲ್ಲಿ ಪ್ರತಿ ಪಂಚಾಯತಿಗೆ ಎಷ್ಟು ಮನೆಯನ್ನು ಮತ್ತು ನಿವೇಶನಗಳನ್ನು ಕೊಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ; ಎಷ್ಟು ವರ್ಷದಲ್ಲಿ ಗುಡಿಸಲುಗಳಿಲ್ಲದ ಪಂಚಾಯತಿಯನ್ನು ಘೋಷಣೆ ಮಾಡುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ;

ಆ) ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ಕಟ್ಟಿಕೊಡಲಾಗಿದೆ; ಇನ್ನೂ ಎಷ್ಟು ಉಳಿಕೆ ಮನೆಗಳನ್ನು ಕಟ್ಟಿಕೊಡುವ ಗುರಿ ಸರ್ಕಾರ ಹೊಂದಿದೆ; ಈಗಾಗಲೇ ನಿರ್ಮಾಣ ಮಾಡಿರುವ ಮನೆಗಳಿಗೆ ಬಾಕಿ ಎಷ್ಟು ಹಣ ಕೊಡಬೇಕಾಗಿದೆ?

ಡಾ॥ ಎಂ.ಹೆಚ್. ಅಂಬರೀಷ್ (ಮಾನ್ಯ ವಸತಿ ಸಚಿವರು)

ಅ) ಪ್ರತಿ ವರ್ಷ ಆಯವ್ಯಯದಲ್ಲಿ ನಿಗದಿಪಡಿಸುವ ಅನುದಾನಕ್ಕೆ ಅನುಗುಣವಾಗಿ ಗ್ರಾಮ ಪಂಚಾಯತಿವಾರು ಹೊಸ ಮನೆಗಳ ಗುರಿಯನ್ನು ನೀಡಲಾಗುವುದು. ಪ್ರಗತಿಯಲ್ಲಿರುವ ಮನೆಗಳು ಮತ್ತು ಹೊಸದಾಗಿ ನೀಡುವ ಮನೆಗಳಲ್ಲಿ ಪ್ರತಿ ವರ್ಷ ಕನಿಷ್ಟ 3 ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಗುರಿಯನ್ನು ಸರ್ಕಾರ ಹೊಂದಿರುತ್ತದೆ.